10. ಡಾ: ಅಬ್ದುಲ್ ಅಜೀಜ್ ನಿವೃತ್ತ ಪ್ರೊಫೆಸರ್, ಅರ್ಥಶಾಸ್ತ್ರ ವಿಭಾಗ, ಇನ್ಸಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಾಮಿಕ್ ಛೇಂಜ್ ಬೆಂಗಳೂರು — ಸದಸ್ಯರು
11. ಪ್ರೊ. ಕೆ. ಮೋಹನ್, ನಿವೃತ್ತ ಉಪ ನಿರ್ದೇಶಕರು, ಎನ್‌ಎಎಲ್, ಬೆಂಗಳೂರು — ಸದಸ್ಯರು
12. ಡಾ: ಎಂ. ಮುನಿಯಮ್ಮ ಗುಲ್ಬರ್ಗಾ ವಿಶ್ವ ವಿದ್ಯಾನಿಲಯದ ಮಾಜಿ ಉಪಕುಲಪತಿಗಳು, ಬೆಂಗಳೂರು
13. ಡಾ: ವಿ.ಎಚ್. ರೇಖಾರಾನಿ, ಪ್ರೊಫೆಸರ್, ಅರ್ಥಶಾಸ್ತ್ರ ವಿಭಾಗ, ಕ್ರೈಸ್ಟ್ ಕಾಲೇಜ್, ಬೆಂಗಳೂರು — ಸದಸ್ಯರು
14. ಡಾ: ಕೆ. ಪುಟ್ಟಸ್ವಾಮಯ್ಯ, ಅರ್ಥಶಾಸ್ತ್ರಜ್ಞರು, ಬೆಂಗಳೂರು — ಸದಸ್ಯರು
15. ಕರ್ನಾಟಕ ಸರ್ಕಾರ ಉಪ ಕಾರ್ಯದರ್ಶಿಗಳು ಯೋಜನೆ ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ — ಸದಸ್ಯ-ಕಾರ್ಯದರ್ಶಿ

ಬೆಂಗಳೂರು ನಗರದಲ್ಲಿ ಹಮ್ಮಿಕೊಂಡ ಕ್ರೀಡಾ ಚಟುವಟಿಕೆಗಳು

2259 (2573) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ): ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002-03ನೇ ಸಾಲಿನಲ್ಲಿ ಇಲ್ಲಿಯವರೆಗೆ ಬೆಂಗಳೂರು ನಗರದಲ್ಲಿ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಕೈಗೊಂಡ ಕಾರ್ಯಕ್ರಮಗಳು ಯಾವುವು ಹಾಗೂ ಇವುಗಳಿಗೆ ಖರ್ಚು ಮಾಡಿದ ಹಣವೆಷ್ಟು;

ಆ) ಬೆಂಗಳೂರು ನಗರದಲ್ಲಿ ಹೊಸದಾಗಿ ಈಜುಕೊಳ, ಸ್ಟೇಡಿಯಂ, ಆಟದ ಮೈದಾನಗಳ ಅಭಿವೃದ್ಧಿಗಾಗಿ ಮೇಲ್ಕಂಡ ಸಾಲಿನಲ್ಲಿ ಕೈಗೊಂಡ ಕ್ರಮಗಳೇನು;

ಇ) 2002-03ನೇ ಸಾಲಿನಲ್ಲಿ ಬೆಂಗಳೂರು ನಗರದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಹಾಗೂ ಕಾರ್ಯಕ್ರಮಗಳಿಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಗಳ ವಿವರ ನೀಡುವುದು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು)

ಅ) ಅನುಬಂಧದಲ್ಲಿ ಒದಗಿಸಿದೆ.

ಆ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖಾ ವತಿಯಿಂದ ಈಜುಕೊಳ ನಿರ್ಮಿಸುವ ಯೋಜನೆ ಇರುವುದಿಲ್ಲ. ಬೆಂಗಳೂರು ನಗರ ಜಿಲ್ಲೆಯ ಉತ್ತರ ತಾಲ್ಲೂಕು ಟಿ. ದಾಸರಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ರೂ. 48.0 ಲಕ್ಷ ಅಂದಾಜು ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಆಟದ ಮೈದಾನದ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಸರ್ಕಾರಿ ಹಾಗೂ ಅನುದಾನಿತ 7 ಶಾಲೆಗಳಿಗೆ ತಲಾ ರೂ. 10.000 ಗಳಂತೆ ಒಟ್ಟು ರೂ. 70.000 ಅನುದಾನ ನೀಡಲಾಗಿದೆ.

ಇ) ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲ.

ಅನುಬಂಧ

2002-03ನೇ ಸಾಲಿನಲ್ಲಿ ಬೆಂಗಳೂರು ನಗರದಲ್ಲಿ ಕೈಗೊಂಡ ಕಾರ್ಯಕ್ರಮ ಹಾಗೂ ಇವುಗಳ ವೆಚ್ಚದ ವಿವರ:-

1.	ರಾಜ್ಯ ಮಟ್ಟದ ಮಹಿಳಾ ಕ್ರೀಡಾಕೂಟ	ರೂ. 60,000-00
2.	ಹತ್ತು ಯುವಕ / ಯುವತಿ ಸಂಘಗಳಿಗೆ ಕ್ರೀಡಾ ಸಾಮಗ್ರಿ ಕೊಳ್ಳಲು ಸಹಾಯ ಧನ	ರೂ. 50,000-00
3.	4 ಯುವಕ ಸಂಘಗಳಿಗೆ ವ್ಯಾಯಾಮ ಶಾಲಾ ಉಪಕರಣ ಕೊಳ್ಳಲು	ರೂ. 40,000-00
4.	ಆಟದ ಮೈದಾನ ಅಭಿವೃದ್ಧಿ ಪಡಿಸಲು ಸರ್ಕಾರಿ ಮತ್ತು ಅನುದಾನಿತ 7 ಶಾಲೆಗಳಿಗೆ	ರೂ. 70,000-00
5.	ಜಿಲ್ಲಾ ಮಟ್ಟದ, ರಾಜ್ಯ ಸರ್ಕಾರಿ ನೌಕರರ ಕ್ರೀಡಾ ಕೂಟ, ದಸರಾ ಕ್ರೀಡಾ ಕೂಟ, ಮಹಿಳಾ ಕ್ರೀಡಾ ಕೂಟ, ಗ್ರಾಮೀಣ ಕ್ರೀಡಾಕೂಟ, ರಾಜ್ಯ ಮಟ್ಟದ ಗ್ರಾಮೀಣ ಕ್ರೀಡಾ ಕೂಟ ಗುಂಪು-1 ಮತ್ತು ಗುಂಪು-2, ಜಿಲ್ಲಾ ಮಟ್ಟದ ಯುವಜನ ಮೇಳ, ವಿಭಾಗ ಮಟ್ಟದ ಯುವಜನ ಮೇಳ ಇವುಗಳ ಸಂಘಟನೆ ಹಾಗೂ ಪ್ರಯಾಣ ಭತ್ಯೆ	ರೂ. 3,09,000-00
6.	ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಿಗೆ ಬಯಲು ಮಂದಿರ ನಿರ್ಮಾಣಕ್ಕಾಗಿ	ರೂ. 70,000-00
7.	ಬೆಂಗಳೂರು ನಗರ ಜಿಲ್ಲೆಯ 4 ತಾಲ್ಲೂಕುಗಳ ಗ್ರಾಮೀಣ ಕ್ರೀಡಾ ತರಬೇತಿ ಶಿಬಿರ ಹಾಗೂ ಕ್ರೀಡಾ ಸಾಮಗ್ರಿಗಳ ಖರೀದಿ	ರೂ. 44,000-00
8.	ಬೆಂಗಳೂರು ನಗರ ಜಿಲ್ಲೆಯ 4 ತಾಲ್ಲೂಕುಗಳಲ್ಲಿ ಸಾಹಸಮಯ ಕ್ರೀಡೆಗಳ ಉತ್ತೇಜನಗಳಿಗಾಗಿ ತರಬೇತಿ ಶಿಬಿರ	ರೂ. 70,000-00
9.	ಬೆಂಗಳೂರು ಉತ್ತರ ತಾಲ್ಲೂಕು ಕ್ರೀಡಾಂಗಣವನ್ನು ಟಿ. ದಾಸರಹಳ್ಳಿಯಲ್ಲಿ ನಿರ್ಮಿಸಲು ಅನುದಾನ	ರೂ. 1,95,000-00
10.	ಭಾರತೀಯ, ಶಾಸ್ತ್ರೀಯ ನೃತ್ಯದ 5 ದಿನಗಳ ಕಥಕ್ ಕಾರ್ಯಾಗಾರ, ಯುವಬರಹಗಾರರ ಮತ್ತು ಕಲಾವಿದರ ಬಳಗ ಇವರಿಂದ ಎರಡು ದಿನದ ತರಬೇತಿ ಶಿಬಿರ, ದೂರದರ್ಶನ ಕಾರ್ಯಕ್ರಮಗಳ ನಿರ್ಮಾಣ ಕುರಿತು 5 ದಿನಗಳ ಕಾರ್ಯಾಗಾರ, ಕರ್ನಾಟಕ ಚಲನಚಿತ್ರ ತಾಂತ್ರಿಕ ತರಬೇತಿ ಕೇಂದ್ರ ಇವರಿಂದ ತರಬೇತಿ, ಜಾನಪದ ಕಾರ್ಯಾಗಾರ ಕಾರ್ಯಕ್ರಮ	ರೂ. 1,20,000-00

11. ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗಾಗಿ ಮೂರು ಆಟಿಟ್ಯೂಡ್ ಬಿಲ್ಡಿಂಗ್ ತರಬೇತಿ ಕಾರ್ಯಕ್ರಮ ಹಾಗೂ ಮೂರು ಸಂವಹನ ಕೌಶಲ್ಯ ತರಬೇತಿ ಶಿಬಿರ	ರೂ. 99,000-00
ಒಟ್ಟು ರೂ. ಗಳು	ರೂ. 11,27,000-00

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಬಳಿ ಚಿಟ್ಟೆ ಉದ್ಯಾನವನ ಪ್ರಾರಂಭಿಸುವುದು

2260 (2575) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬನ್ನೇರುಘಟ್ಟದ ರಾಷ್ಟ್ರೀಯ ಉದ್ಯಾನವನದ ಬಳಿ ಚಿಟ್ಟೆಯ ಉದ್ಯಾನವನ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ ಇದಕ್ಕೆ ತೆಗೆಯುವ ವೆಚ್ಚವೆಷ್ಟು;

ಇ) ಇದಕ್ಕಾಗಿ ಎಷ್ಟು ಎಕರೆ ಜಾಗವನ್ನು ನೀಡಲಾಗಿದೆ;

ಈ) ಇದಕ್ಕಾಗಿ ಹಣಕಾಸಿನ ನೆರವನ್ನು ನೀಡಲು ಒಪ್ಪಿಕೊಂಡಿರುವ ಸಂಸ್ಥೆಗಳು ಯಾವುವು;

ಉ) ಇದಕ್ಕಾಗಿ ರಾಜ್ಯ ಸರ್ಕಾರವು ಖರ್ಚು ಮಾಡುವ ಹಣವೆಷ್ಟು;

ಊ) ಇದಕ್ಕಾಗಿ ಕೇಂದ್ರ ಸರ್ಕಾರ ಹಾಗೂ ಇತರ ಸಂಸ್ಥೆಗಳಿಂದ ಬಂದ ಹಣವೆಷ್ಟು;

ಋ) ಈ ಚಿಟ್ಟೆ ಪಾರ್ಕ್ ಅನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಹತ್ತಿರ ಚಿಟ್ಟೆ ಉದ್ಯಾನವನವು ಸ್ಥಾಪಿಸಲ್ಪಟ್ಟು ಕರ್ನಾಟಕ ಮೃಗಾಲಯ ಪ್ರಾಧಿಕಾರದಿಂದ ನಡೆಸಲ್ಪಡುತ್ತದೆ. ಸಂಶೋಧನೆ ಅಂಶದ ಪ್ರಾಯೋಜನೆಯು, ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ, ಪ್ರಾಯೋಜನೆಯ ಪರಿಶೋಧಕರಿಂದ ಮತ್ತು ಶಿಕ್ಷಣದ ವಿಸ್ತರಣಾ ಕಾರ್ಯಕ್ರಮವು, ಬೆಂಗಳೂರಿನ ಸರ್ಕಾರೇತರ ಸಂಸ್ಥೆಯಾದ ಅಶೋಕ ಟ್ರಸ್ಟ್ ಫಾರ್ ರೀಸರ್ಚ್ ಇನ್ ಎಕಾಲಜಿ ಮತ್ತು ಎನ್‌ವೈರ್ನಮೆಂಟ್ (ATREE) ರವರಿಂದ ಕಾರ್ಯರೂಪಕ್ಕೆ ತರಲ್ಪಡುತ್ತದೆ.

ಆ) ಈ ಚಿಟ್ಟೆ ಉದ್ಯಾನವನದ ಅನುಮೋದನೆಗೊಂಡ ಒಟ್ಟು ಅಂದಾಜು ವೆಚ್ಚ ರೂ. 381.25 ಲಕ್ಷಗಳು.

ಇ) ಸುಮಾರು 8 ಎಕರೆ ಪ್ರದೇಶ

ಈ) ಭಾರತ ಸರ್ಕಾರದ ಬಯೋಟೆಕ್ನಾಲಜಿ ಇಲಾಖೆ ಮತ್ತು ಕರ್ನಾಟಕ ಸರ್ಕಾರ.

ಉ) ರಾಜ್ಯ ಸರ್ಕಾರವು ಖರ್ಚು ಮಾಡುವ ಹಣ ರೂ. 60.00 ಲಕ್ಷಗಳು.

ಊ) ಕೇಂದ್ರ ಸರ್ಕಾರ (ಬಯೋಟೆಕ್ನಾಲಜಿ ಇಲಾಖೆ) ರೂ. 230.31 ಲಕ್ಷಗಳನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಿರುತ್ತದೆ.